# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ.ಬಿ12(1)ಪಿಆರ್/106 /2024-25

ಮುಖ್ಯ ಆಯುಕ್ತರವರ ಕಛೇರಿ
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 31-7-24

## ಕಛೇರಿ ಆದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ 'ಸಿ' ವೃಂದದ ಕಂದಾಯ ಪರಿವೀಕ್ಷಕರ ಸಾಮಾನ್ಯ ವರ್ಗಾವಣೆ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 63 ಎಂಎನ್‌ಯು 2023, ದಿನಾಂಕ: 04-07-2024
2) ಸಂಖ್ಯೆ: ಬಿ12(5)ಪಿಆರ್/112/24-25, ದಿನಾಂಕ: 20-07-2024ರ ಸುತ್ತೋಲೆ
3) ಮಾನ್ಯ ಮುಖ್ಯ ಆಯುಕ್ತರು ರವರ ಸಂಖ್ಯೆ: ಬಿ12(5)ಪಿಆರ್/112/24-25ರಲ್ಲಿ ದಿನಾಂಕ: 22-07-2024ರಂದು ಹೊರಡಿಸಿರುವ ಮಾರ್ಗಸೂಚಿಗಳು.
4) ದಿನಾಂಕ: 26-07-2024ರಂದು ಸ್ಥಳ ಆಯ್ಕೆ ಸಂಬಂಧ ನಡೆದ ಕೌನ್ಸಿಲಿಂಗ್ ಪ್ರಕ್ರಿಯೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-(1)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದನುಸಾರ ಉಲ್ಲೇಖ-(2)ರ ಸುತ್ತೋಲೆಯಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ವೃಂದದ ಕಂದಾಯ ಪರಿವೀಕ್ಷಕರ ವೃಂದದ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದ್ದು, ಉಲ್ಲೇಖ-(4)ರಂತೆ ನಡೆದ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಕೆಳಕಂಡ ಕಂದಾಯ ಪರಿವೀಕ್ಷಕರುಗಳು ಆಯ್ಕೆ ಮಾಡಿರುವಂತೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ವರ್ಗಾಯಿಸಿ ಆದೇಶಿಸಿದೆ.

| ಕ್ರ.ಸಂ | ಶ್ರೀಯುತರ | ಹಾಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿ | ಕೌನ್ಸಿಲಿಂಗ್ ಮುಖಾಂತರ ಆಯ್ಕೆ ಮಾಡಿಕೊಂಡಿರುವ ವರ್ಗಾಯಿಸಿ ನೇಮಿಸಿರುವ ಸ್ಥಳ |
|---|---|---|---|
| 1. | ಸಂತೋಷ್ ಪಿ | ಉಪ ಆಯುಕ್ತರು (ಕಂದಾಯ) | ಸ.ಕಂ.ಅ (ವೈಟ್‌ಫೀಲ್ಡ್) ಉಪ ವಿಭಾಗ |
| 2. | ಅಮರ್‌ನಾಥ್ ಕೆ | | ಸ.ಕಂ.ಅ (ಹೊರಮಾವು) ಉಪ ವಿಭಾಗ |
| 3. | ಕೆ.ಸತೀಶ್ ಕುಮಾರ್ | | ಸ.ಕಂ.ಅ (ಸಿ.ವಿ.ರಾಮನ್‌ನಗರ) ಉಪ ವಿಭಾಗ |

ಮೇಲ್ಕಂಡ ಆದೇಶದನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು / ಇಲಾಖಾ ಮುಖ್ಯಸ್ಥರುಗಳು ವರ್ಗಾವಣೆಗೊಂಡ ನೌಕರರುಗಳು ವರ್ಗಾಯಿಸಲಾಗಿರುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ಅನುವಾಗುವಂತೆ ಅಗತ್ಯ ಕ್ರಮಕೈಗೊಳ್ಳುವುದು.

ಮೇಲ್ಕಂಡ ಆದೇಶವು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

ಷರತ್ತುಗಳ:-

1. ಸಾಮಾನ್ಯ ವರ್ಗಾವಣೆಗೊಂಡಿರುವ ಸಿಬ್ಬಂದಿಗಳು ಬೇರೆ ಸ್ಥಳಕ್ಕೆ ವರ್ಗಾವಣೆ ಕೋರುವಂತಿಲ್ಲ ಹಾಗೂ ಈ ಆದೇಶವನ್ನು ಪಾಲಿಸದ ಸಂಬಂಧಪಟ್ಟ ಸಿಬ್ಬಂದಿಗಳು ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
2. ವರ್ಗಾವಣೆ ಪ್ರಕ್ರಿಯೆ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು / ದೂರುಗಳು ಸ್ವೀಕೃತಿಯಾದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಷರತ್ತಿಗೊಳಪಡಿಸಿದೆ.

3. ಸದರಿ ವರ್ಗಾವಣೆ ಆದೇಶದಲ್ಲಿ ವರ್ಗಾವಣೆಗೊಂಡಿರುವ ಸಿಬ್ಬಂದಿಗಳು ವರ್ಗಾವಣೆಗೊಂಡ ಸ್ಥಳದಲ್ಲಿ ವರದಿ ಮಾಡಿಕೊಳ್ಳುವ ಬಗ್ಗೆ ಇಲಾಖಾ ಮುಖ್ಯಸ್ಥರು ಅಗತ್ಯ ಕ್ರಮ ಕೈಗೊಳ್ಳುವುದು.

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದಂತೆ)

31-7-24

ವಿಶೇಷ ಆಯುಕ್ತರು (ಆಡಳಿತ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

31/7/24 31/7/24

ಪ್ರತಿಯನ್ನು : ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.

: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.

: ಮಾನ್ಯ ವಿಶೇಷ ಆಯುಕ್ತರು(ಆಡಳಿತ)/(ಕಂದಾಯ)/(ಮಾಹಿತಿ ತಂತ್ರಜ್ಞಾನ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ಎಲ್ಲಾ ವಲಯ ಆಯುಕ್ತರು ರವರಿಗೆ ಮಾಹಿತಿಗೆ ಕಳುಹಿಸಿದೆ.

: ಸಂಬಂಧಪಟ್ಟ ವಲಯ ಜಂಟಿ ಆಯುಕ್ತರು/ಜಂಟಿ ಆಯುಕ್ತರು/ಉಪ ಆಯುಕ್ತರು (ಕಂದಾಯ) ರವರುಗಳಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.

: ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.

: ಸಂಬಂಧಪಟ್ಟ ಉಪ ನಿಯಂತ್ರಕರು (ಹಣಕಾಸು) ರವರಿಗೆ ಅಗತ್ಯ ಕ್ರಮಕ್ಕೆ ಕಳುಹಿಸಿದೆ.

: ಸಂಬಂಧಪಟ್ಟ ನೌಕರರುಗಳಿಗೆ / ಕಛೇರಿ ಪ್ರತಿ.